ಕರ್ನಾಟಕ ಸರ್ಕಾರ

ಜನವರಿ 13, 2017

## ಮಕರ ಸಂಕ್ರಾಂತಿ ಹಬ್ಬ :
## ರಾಜ್ಯದ ಜನತೆಗೆ ಮುಖ್ಯಮಂತ್ರಿ ಶುಭಾಶಯ




**ಬೆಂಗಳೂರು, ಜನವರಿ 13:**

ಮಕರ ಸಂಕ್ರಾಂತಿ ಹಬ್ಬ ಸುಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ ಶುಭ ಹಾರೈಸಿದ್ದಾರೆ.

ನಮ್ಮ ಗ್ರಾಮೀಣ ಸಂಸ್ಕೃತಿಯ ಸೊಗಸು ಮತ್ತು ಸಂಪ್ರದಾಯದ ಸೊಬಗನ್ನು ಬಿಂಬಿಸುವ ಮಕರ ಸಂಕ್ರಾಂತಿ ಹಬ್ಬವು ತಮ್ಮ ಭೂಮಿ ಹಾಗೂ ರಾಸುಗಳೊಡನೆ ರೈತರು ಮತ್ತಷ್ಟು ಬಾಂಧವ್ಯವನ್ನು ಬೆಳೆಸಿಕೊಳ್ಳುವ ವಿಶೇಷ ಮತ್ತು ವಿಶಿಷ್ಠ ಆಚರಣೆಯಾಗಿದೆ. ಸಂಕ್ರಾಂತಿಯ ಹಬ್ಬದ ಸಡಗರ ಮತ್ತು ಸಂಭ್ರಮದಲ್ಲಿ ಗೃಹಿಣಿಯರು ಬಂಧು–ಮಿತ್ರರ ಮನೆ–ಮನೆಗೆ ತೆರಳಿ, ಎಳ್ಳು ಬೀರುವ ಸಂಪ್ರದಾಯ ಹಾಗೂ ಎಳ್ಳು *ಬೆಲ್ಲ ತಿಂದು ಒಳ್ಳೆಯ ಮಾತಾಡು* ಎಂದು ಪ್ರೀತಿಯ ಸಲಹೆ ಕೊಡುವ ಆಚರಣೆ ಒಂದೆಡೆ ಸಂಬಂಧಗಳನ್ನು ಹಾಗೂ ಮತ್ತೊಂದೆಡೆ ಸ್ನೇಹವನ್ನು ಬೆಸೆಯಲು ಅತ್ಯುತ್ತಮ ವೇದಿಕೆಯಾಗಿದೆ.

ಇಳೆಗೆ ಸಕಾಲದಲ್ಲಿ ಮಳೆಯಾಗಿ, ಇಳೆಯಲ್ಲಿ ಉತ್ತಮ ಬೆಳೆಯಾಗಿ ರಾಜ್ಯದ ಜನತೆಯಲ್ಲಿ, ವಿಶೇಷವಾಗಿ ನಮ್ಮ ರೈತರ ಬಾಳಲ್ಲಿ, ಸಂತಸ ಮನೆ ಮಾಡಲಿ ಎಂಬುದೇ ಈ ಬಾರಿಯ ಸಂಕ್ರಾಂತಿ ಹಬ್ಬದ ಸುಸಂದರ್ಭದಲ್ಲಿ ನನ್ನ ಮನದಾಳದ ಹಾರೈಕೆ ಎಂದು ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

*********

**ಡಿ ಪಿ ಎಂ**